O.S. ನಂಬರಃ 78/2017

ಪಿ. ಡಬ್ಲ್ಯೂಃ 1

ದಿಃ 04-08-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದಃ</u>

ದಾವೆಯಲ್ಲಿ ಬರೆದ ವಿಷಯವನ್ನು ಕನ್ನಡದಲ್ಲಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳನ್ನು ಕನ್ನಡದಲ್ಲಿ ತಿಳಿದುಕೊಂಡಿದ್ದೇನೆ. ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದ ವಿಷಯವನ್ನು ತಿಳಿದುಕೊಂಡಿದ್ದೇನೆ. ಗೋವಿಂದ ರಾಮಯ್ಯ ಶೆಟ್ಟಿ ಮೂಲತಃ ಗೋಕರ್ಣದವರಿರುತ್ತಾರೆ. ಗೋವಿಂದ ರಾಮಯ್ಯ ಶೆಟ್ಟಿ ಮೃತಪಟ್ಟ ಬಗ್ಗೆ ದಾಖಲೆ ಇದೆಯಾ ಎಂದರೆ ಆ ಸಮಯದಲ್ಲಿ ಚಿಕ್ಕವರಿದ್ದೇವು ಎಂದು ಹೇಳುತ್ತಾರೆ. ದಿಃ 08-01-1966 ರಂದು ಗೋವಿಂದ ರಾಮಯ್ಯ ಶೆಟ್ಟಿ ಮೃತಪಟ್ಟ ಬಗ್ಗೆ ನನ್ನ ತಂದೆ ಮಾಹಿತಿ ನೀಡಿದ್ದರು. ಸದರಿ ಮಾಹಿತಿಯನ್ನು ನನ್ನ ತಂದೆ ಇಂದಿಗೆ ಅಂದಾಜು 28 ವರ್ಷಗಳ ಹಿಂದೆ ನೀಡಿದ್ದಾರೆ. ಸದರಿ ಗೋವಿಂದ ಮೃತಪಟ್ಟ ಬಗ್ಗೆ ದಿನಾಂಕವನ್ನು ನನ್ನ ಸಹೋದರ ಬರೆದಿಟ್ಟುಕೊಂಡಿದ್ದನ್ನು ದಾವೆ ಬರೆಯುವ ಸಮಯದಲ್ಲಿ ಮಾಹಿತಿ ನೀಡಲಾಗಿದೆ.

ನನ್ನ ತಂದೆಯ ತಂದೆಯಾದ ಗೋವಿಂದ ರಾಮಯ್ಯ ಶೆಟ್ಟಿಯ ತಂದೆಯ ಹೆಸರು ರಾಮಯ್ಯ ಶೆಟ್ಟಿ ಅವರೂ ಸಹ ಮೂಲತಃ ಗೋಕರ್ಣದವರು. ಗೋವಿಂದ ರಾಮಯ್ಯ

ಶೆಟ್ಟಿರವರಿಗೆ ನಾಗಮ್ಮ ಹಾಗೂ ಕಲ್ಯಾಣಿ ಎಂಬುವ ಇಬ್ಬರು ಹೆಂಡತಿಯರಿದ್ದು, ಅವರಿಬ್ಬರನ್ನು ನಾನು ನೋಡಿದ್ದೇನೆ. ನನಗೀಗ 48 ವರ್ಷ ಇದ್ದು, 1974 ರಲ್ಲಿ ಜನಿಸಿದ್ದೇನೆ. ಗೋವಿಂದ ರಾಮಯ್ಯ ಶೆಟ್ಟಿರವರ ಹೆಂಡತಿಯಾದ ಕಲ್ಯಾಣಿ ದಿಃ 06-01-1966 ರಂದು ಮೃತಪಟ್ಟಿದ್ದಾರೆ ಎಂದು ದಾವೆಯಲ್ಲಿ ಬರೆಸಿದ್ದೇನೆ ಎಂದರೆ ಸರಿ, ಸಾಕ್ಷಿ ಫೊಟೋದಲ್ಲಿ ನೋಡಿದ್ದೇನೆ ಎಂದು ಹೇಳುತ್ತಾರೆ. ಗೋವಿಂದ ರಾಮಯ್ಯ ಶೆಟ್ಟಿರವರ ಎರಡನೇ ಹೆಂಡತಿಯಾದ ನಾಗಮ್ಮ ಇವಳು ಅಲಗೇರಿಯಲ್ಲಿ ವಾಸವಿದ್ದಳು. ನಾಗಮ್ಮಳು ಕಲ್ಯಾಣಿ ಜೊತೆ ವಾಸ್ತವ್ಯ ಇರಲಿಲ್ಲ ಎಂದರೆ ಗೋಕರ್ಣದಲ್ಲಿ ಕಲ್ಯಾಣಿ ವಾಸ್ತವ್ಯ ಇದ್ದು, ಅಲಗೇರಿಯಲ್ಲಿ ನಾಗಮ್ಮ ವಾಸ್ತವ್ಯ ಇದ್ದಳು, ತಂದೆ ಆಗಾಗ ಅಲಗೇರಿಗೆ ಬಂದು ಹೋಗುತ್ತಿದ್ದರು ಎಂದು ಹೇಳುತ್ತಾರೆ.

ದಾವೆಯಲ್ಲಿ ತಿಳಿಸಿದ ಗೋವಿಂದ ರಾಮಯ್ಯ ಶೆಟ್ಟಿ, ಕಲ್ಯಾಣಿ ಹಾಗೂ ನಾಗಮ್ಮ ಮತ್ತು ನನ್ನ ತಂದೆಯಾದ ಅನಂತ ಗೋವಿಂದ ಶೆಟ್ಟಿರವರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಾಗಮ್ಮಳಿಗೆ ಸಂಬಂಧಪಟ್ಟ ಆಸ್ತಿ ಎಂದರೆ ಸರಿ. ದಾವಾ ಆಸ್ತಿಗಳಲ್ಲದೇ ಅಂಕೋಲಾ ತಾಲೂಕಿನ ಕಟ್ಟಿನಹಕ್ಕಲು ವ್ಯಾಪ್ತಿಯಲ್ಲಿಯ ಸರ್ವೇ ನಂ. 29/1 ಕ್ಷೇತ್ರ 4-ಎಕರೆ 24-ಗುಂಟೆ ಆಸ್ತಿ ನಾಗಮ್ಮಳಿಗೆ ಸೇರಿತ್ತು ಎಂದರೆ ಸರಿ. ಸದರಿ ಆಸ್ತಿ ಏನಾಗಿದೆ ಎಂದು ಪರಿಶೀಲಿಸಿಲ್ಲ. ಕಟ್ಟಿನಹಕ್ಕಲು ವ್ಯಾಪ್ತಿಯಲ್ಲಿಯ ಜಮೀನು ನಾಗಮ್ಮಳಿಗೆ ಯಾವ ಮೂಲದಿಂದ ಬಂದಿದೆ ಎಂದು ಮಾಹಿತಿ ಇಲ್ಲ. ಸದರಿ ಆಸ್ತಿಯ ಕುರಿತು ದಾವೆಯಲ್ಲಿ ಮಾಗಣಿ ಮಾಡಿಲ್ಲ ಎಂದರೆ ಸರಿ. ಸದರಿ ಆಸ್ತಿಯನ್ನು ನಾಗಮ್ಮಳು ಮಾರಾಟ ಮಾಡಿದ್ದಾಳೆ ಎಂದರೆ ಮಾಹಿತಿ ಇಲ್ಲ. ಪ್ರತಿವಾದ ಪತ್ರದಲ್ಲಿ ಈ ವಿಷಯ ಬರೆದಿದ್ದರ ಕುರಿತು

ಪರಿಶೀಲಿಸಿಲ್ಲ ಎಂದರೆ ಸರಿ. ಸದರಿ ನಾಗಮ್ಮ ನಮ್ಮ ತಂದೆಗೆ ಸಂಬಂಧವಿರದೇ ಇರುವುದರಿಂದ ನಾಗಮ್ಮಳ ಸಂಪೂರ್ಣ ಆಸ್ತಿ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ನಮ್ಮ ತಿಳುವಳಿಕೆಯಿಂದಲೂ ಗೋಕರ್ಣದಲ್ಲಿಯೇ ವಾಸವಿದ್ದರು. ನಮ್ಮ ತಂದೆ ವ್ಯವಹಾರ ಹಾಗೂ ಕಚೇರಿಗಳಿಗೆ ಅರ್ಜಿ ವಗೈರೆ ನೀಡಿ ಭಾಗಿಯಾದ ಬಗ್ಗೆ ಕಾಗದ ಪತ್ರಗಳು ಇರುತ್ತವೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಕಲ್ಯಾಣಿ ಮತ್ತು ನಾಗಮ್ಮರವರ ಕುರಿತಾಗಿ ನನ್ನ ತಂದೆ ಜೀವಿತಾವಧಿಯಲ್ಲಿ ಅರ್ಜಿ ವಗೈರೆಗಳನ್ನು ಅಂಕೋಲಾ ಕಚೇರಿಗಳಿಗೆ ನೀಡಿದ್ದೀರಾ ಎಂದರೆ ಸಾಕ್ಷಿ ಅಲಗೇರಿ ವ್ಯಾಪ್ತಿಯ ಕಚೇರಿಗೆ ನೀಡಿದೆ ಎಂದು ಹೇಳುತ್ತಾರೆ. ಸದರಿ ದಾಖಲೆಗಳನ್ನು ಈ ಪ್ರಕರಣದಲ್ಲಿ ನೀಡಿಲ್ಲ ಎಂದರೆ ಸರಿ. ಸದರಿ ಕಚೇರಿಗೆ ನನ್ನ ತಂದೆ ಜೀವಿತಾವಧಿಯಲ್ಲಿ ಯಾವುದೇ ಅರ್ಜಿ ನೀಡಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಿಗೆ ಹಾಗೂ ಕಟ್ಟಿನಹಕ್ಕಲು ಗ್ರಾಮದ ಆಸ್ತಿಗೆ ನನ್ನ ತಂದೆ ಹಾಗೂ ಅಜ್ಜ ಯಾವುದೇ ಕಚೇರಿಗಳ ಜೊತೆ ಅರ್ಜಿ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನಾಗಮ್ಮ ಗೋವಿಂದ ಶೆಟ್ಟಿರವರು ದಿಃ 18-08-1986 ರಂದು ಜಿಪಿಎ ಮಾಡಿದ್ದಾರೆ ಎಂದು ತಿಳಿಸಿದ ದಾಖಲೆಯನ್ನು ನಾನು ನೋಡಿಲ್ಲ. ದಿಃ 13-08-1986 ರ ಮೃತ್ಯುಪತ್ರವನ್ನು ದಿಃ 18-08-1986 ರಂದು ನೋಂದಾಯಿಸಲಾಗಿದೆ ಎಂದು ದಾವೆಯಲ್ಲಿ ತಿಳಿಸಿದ ದಾಖಲೆಯನ್ನು ನಾನು ನೋಡಿಲ್ಲ. ಸದರಿ ದಾಖಲೆಗಳನ್ನು ನಾನು ವಕೀಲರಿಗೆ ನೀಡಿಲ್ಲ.

ಸದರಿ ಜಿಪಿಎ ಮತ್ತು ಮೃತ್ಯುಪತ್ರದ ದಿನಾಂಕಗಳನ್ನು ದಾವೆಯಲ್ಲಿ ಯಾವ ಆಧಾರದ ಮೇಲೆ ಬರೆದಿದ್ದಾರೆ ಎಂದು ಮಾಹಿತಿ ಇಲ್ಲ ಎಂದರೆ ಸರಿ.

ಮೂಲದಾವಾ ನಂ. 80/1986 ರ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಆ ದಾವೆಯಲ್ಲಿ ಏನು ಬರೆದಿದೆ ಎಂಬುವುದನ್ನು ಮಾತ್ರ ಓದಿದ್ದೇನೆ ಎಂದು ಹೇಳುತ್ತಾರೆ. ಸದರಿ ದಾವೆ ಯಾರು ಯಾವ ಮಾಗಣಿ ಕೇಳಿ ಮಾಡಿದ್ದಾರೆ ಮತ್ತು ಅದರಲ್ಲಿ ಏನು ಆದೇಶವಾಗಿದೆ ಎಂದು ಮಾಹಿತಿ ಇಲ್ಲ. ಮೂಲದಾವಾ ನಂ. 80/1986 ರಲ್ಲಿ ನಾಗಮ್ಮಳು ತನ್ನ ಗಂಡನ ಹೆಸರು ಗೋವಿಂದ ಅನಂತ ಶೆಟ್ಟಿ ಎಂದು ಬರೆಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿಯ ಗೋವಿಂದ ಅನಂತ ಶೆಟ್ಟಿ ಬೇರೆ ಹಾಗೂ ಈ ದಾವೆಯಲ್ಲಿ ತಿಳಿಸಿದ ಗೋವಿಂದ ರಾಮಯ್ಯ ಶೆಟ್ಟಿ ಬೇರೆ ಎಂದರೆ ಸರಿಯಲ್ಲ. ಗೋವಿಂದ ಅನಂತ ಶೆಟ್ಟಿರವರಿಗೆ ಕಲ್ಯಾಣಿ ಮತ್ತು ನಾಗಮ್ಮ ಎಂಬುವ ಇಬ್ಬರು ಹೆಂಡತಿಯರಿದ್ದು, ಆ ಹೆಸರುಗಳು ನಮ್ಮ ಕುಟುಂಬದ ಗೋವಿಂದ ರಾಮಯ್ಯ ಶೆಟ್ಟಿರವರಿಗೆ ಹೆಸರುಗಳಲ್ಲಿ ಸಾಮ್ಯತೆ ಇರುವುದರ ಗೈರು ಫಾಯಿದೆ ತೆಗೆದುಕೊಂಡು ಈ ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳುವ ಗೋವಿಂದ ರಾಮಯ್ಯ ಶೆಟ್ಟಿರವರಿಗೂ ಹಾಗೂ ದಾವಾ ಆಸ್ತಿಗಳಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಹಾಗೂ ಕಟ್ಟಿನಹಕ್ಕಲು ಆಸ್ತಿಗಳು ಗೊವಿಂದ ಅನಂತ ಶೆಟ್ಟಿರವರಿಗೆ ಸಂಬಂಧಪಟ್ಟಿದ್ದು, ಗೋವಿಂದ ರಾಮಯ್ಯ ಶೆಟ್ಟಿರವರಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಈ ಕಾರಣಕ್ಕಾಗಿಯೇ ಮೂಲದಾವೆ ನಂ. 80/1986 ರ ದಾಖಲೆ ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.